ನೋಂದಣಾಧಿಕಾರಿಗಳ ಕಛೇರಿಗಳಿಗೂ ದೂರವಾಣಿ ಸೌಲಭ್ಯ ಕಲ್ಪಿಸಿಲ್ಲ. ಇದನ್ನು ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಈ) 1982-83ಕೋಟಿ ರೂಪಾಯಿಗಳು. (ನವೆಂಬರ್, 1991ರಿಂದ ಅಕ್ಟೋಬರ್ 1992)

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಈ ಸ್ಟಾಂಪ್ ಕ್ಯೂಟಿಯಲ್ಲಿ ನಾನು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ, ಬೆಂಗಳೂರು ಮಟ್ಟಿಗೆ ಮಾತ್ರ ಸ್ಟಾಂಪ್ ಪೇಪರ್ ಸಿಕ್ಕತಕ್ಕಂಥ ಕೆಲಸ ಆಗುತ್ತಿದೆ. ಬೇರೆ ಪಟ್ಟಣದಲ್ಲಿ ಸ್ಟಾಂಪ್ ಪೇಪರ್ ಸ್ಟಾಕ್ ಇಲ್ಲವೆಂದು ಹೇಳುತ್ತಿದ್ದಾರೆ. ಜೊತೆಗೆ, 10 ಸಾವಿರ ಮಟ್ಟಿಗೆ ಸ್ಟಾಂಪ್ ಡ್ಯೂಟಿ ಸಿಕ್ಕುತ್ತಾ ಇದೆ. ಅದರ ಮೇಲೆ ಕೊಡತಕ್ಕಂಥಾದ್ದನ್ನು, ಡೇಟ್ಸ್ ಕೊಟ್ಟು ಕೊಡುತ್ತಿದ್ದಾರೆ ಇದನ್ನು ಸರಿಪಡಿಸತಕ್ಕ ಕೆಲಸ ಮಾಡುವುದಕ್ಕಾಗುತ್ತದೆಯೇ? ಎರಡನೆಯದಾಗಿ, ಗ್ರಾಮಾಂತರ ಪ್ರದೇಶದಲ್ಲಿ, ಏರಿಯಾವೈಸ್‌ಸ್ಟಾಂಪ್ ಡ್ಯೂಟಿಯನ್ನು ಏನು ನಿಗದಿ ಮಾಡಿದ್ದಾರೆ, ಅದು ಸರಿಯಾಗಿಲ್ಲ, ಬಹಳ ಏರಪೇರು ಇದೆ. ಯಾವುದೋ ಒಂದು ಸಂಬಂದಪಟ್ಟ ಸರ್ವೆ ನಂಬರ್ ಇದನ್ನೂ ಸರಿಪಡಿಸತಕ್ಕ ಕೆಲಸ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಈ ಪ್ರಶ್ನೆ ಇರುವುದು ಎಷ್ಟು ಸಬ್ ರಿಜಿಸ್ಟ್ರಾರ್ ಆಫೀಸುಗಳಿವೆ. ಅವುಗಳಿಗೆ ಟೆಲಿಫೋನ್ ಸಂಪರ್ಕ ಇದೆಯೋ ಇಲ್ಲವೇ ಎಂದು. ಸ್ಟಾಂಪ್ ಪೇಪರ್ ಬಗ್ಗೆ ಸ್ಪೇರ್‌ಸಿಟಿ ಇದೆ. ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ, ಉತ್ತರ ಕೊಡುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ : ನಾನು ಕೇಳಿರತಕ್ಕ ಪ್ರಶ್ನೆ, ಬೆಂಗಳೂರಿಗೆ ಸೀಮಿತವಾಗಿದೆ. ಆದರೂ ಕೂಡ ಇದರಲ್ಲಿ, ಉಪ ಪ್ರಶ್ನೆಯನ್ನು ಕೇಳತಕ್ಕ ಅವಶ್ಯಕತೆ ಇದೆ. ದಯಮಾಡಿ, ಉತ್ತರ ಕೊಡತಕ್ಕ ಕೆಲಸ ಆಗಬೇಕು.

ಉಪಾಧ್ಯಕ್ಷರು : ತಾವು ಏನು ಕೇಳುತ್ತೀರಿ, ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ, ತಾವು ಬೇರೆ ಪ್ರಶ್ನೆ ಕೇಳಿ, ಅದಕ್ಕೆ ಉತ್ತರ ಕೊಡುತ್ತಾರೆ.

ಬಗರ್ ಹುಕುಂ ಸಾಗುವಳಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ

88 - ಶ್ರೀ ಇಲ್ಕಲ್ ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ನಡೆಸಲು ಅರ್ಜಿ ಸಲ್ಲಿಸಿರುವ ಸಂಖ್ಯೆ ಎಷ್ಟು?

ಆ) ಸರ್ಕಾರ ಈ ಹಿಂದೆ ಬಗರ್‌ಹುಕುಂ ಸಾಗುವಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ಪ್ರಚಾರವಿಲ್ಲದೆ ಗ್ರಾಮಾಂತರ ಜನತೆಯ ಗಮನಕ್ಕೆ ಬಾರದಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರದವರು ಅಂತಹ ರೈತರಿಗೆ ಪುನಃ ಅರ್ಜಿಸಲ್ಲಿಸಲು ಕಾಲಾವಕಾಶ ನೀಡುವರೆ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) 10,86,826

ಆ) ಇಲ್ಲ. ಸಾಕಷ್ಟು ಪ್ರಚಾರವನ್ನು ಕೊಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಇಳ್ಕಲ್ ವಿಜಯಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಬಗರ್ ಹುಕುಂ ಸಾಗುವಳಿ ಮಾಡತಕ್ಕ ರೈತರು ಅರ್ಜಿ ಸಲ್ಲಿಸುವುದಕ್ಕೆ ಕಾಲಾವಕಾಶವನ್ನು ನನ್ನ ಪ್ರಶ್ನೆಯಲ್ಲಿ ಕೇಳಿದ್ದೇನೆ. ಆದರೆ, ಅದು ಉದ್ಭವಿಸುವುದಿಲ್ಲವೆಂದು ಮಂತ್ರಿಗಳು ಉತ್ತರ ನೀಡಿದ್ದಾರೆ. ಸಾಮಾನ್ಯವಾಗಿ, ಬಗರ್ ಹುಕುಂ ಸಾಗುವಳಿ ಮಾಡಿದಂಥ ಜನ, ಅನಕ್ಷರಸ್ಥರು, ವಿಷಯ ತಿಳಿಯದೇ ಇರತಕ್ಕ ಜನ ಇದು ವ್ಯಾಪಕವಾದ ಪ್ರಚಾರ ಇಲ್ಲದೇ ಇರುವುದರಿಂದ, ಅನೇಕ ಜನ ಅರ್ಜಿ ಸಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ. ಕಾಲಾವಕಾಶವನ್ನು ಮುಂದುವರಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಸಾಕಷ್ಟು ಪ್ರಚಾರ ಕೊಟ್ಟಿತ್ತು. ಈಗಾಗಲೇ ಪ್ರಚಾರ ಕೊಟ್ಟಾಗಿನಿಂದ, ತಾಲ್ಲೂಕು ಆಫೀಸುಗಳಿಗೆ ತಿಳಿಸಿದೆ. ಪೇಪರಿನಲ್ಲೆಲ್ಲಾ ಬಂದಿದೆ ಮತ್ತು ಅದಕ್ಕನುಗುಣವಾಗಿ ಆರು ತಿಂಗಳು ಟೈಮ್ ಬೇರೆ ಕೊಟ್ಟಿದ್ದೇವೆ. ಒಟ್ಟು ಸುಮಾರು 10 ಲಕ್ಷ 86 ಸಾವಿರ ಅರ್ಜಿಗಳು ಬಂದಿದೆ. 25.8 ಲಕ್ಷ ಎಕರೆಯನ್ನು ಕವರ್ ಮಾಡುತ್ತದೆ. ಈಗ ಆ ಕಾಲ ಮುಗಿದ ನಂತರ ಸುಮಾರು 28,723 ಅರ್ಜಿಗಳು ಬಂದಿದೆ. ಇದಕ್ಕೆ ಟೈಮ್ ಮುಂದುವರಿಸಬೇಕೆಂದು ಕೇಳುತ್ತಾರೆ. ಟೈಮ್ ಮುಂದುವರಿಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ರುದ್ರಪ್ಪ : ಮಾನ್ಯ ಅಧ್ಯಕ್ಷರೆ, ಏನು ಅವಧಿ ವಿಸ್ತರಣೆ ಕೊಟ್ಟಿದ್ದರು ಆ ಅವಧಿ ಮುಗಿದ ಮೇಲೂ ಸಹ ಅದು, ಎಷ್ಟೋ ಜನ ರೈತರಿಗೆ, ಗ್ರಾಮಾಂತರ ಪ್ರದೇಶದ ರೈತರು, ಬಡವರಿಗೆ ಗೊತ್ತಿಲ್ಲ. ನಮ್ಮ ತಾಲ್ಲೂಕಿನಲ್ಲೇ ಒಂದೂ ಒಂದೂವರೆ ಸಾವಿರ ಅರ್ಜಿಗಳು ಈಗ ಬಂದಿವೆ. ಆದುದರಿಂದ ಅವಧಿಯನ್ನು ಎಕ್ಸ್‌ಟೆಂಡ್ ಮಾಡುವುದು ಒಳ್ಳೆಯದು. ಇದರಿಂದ ಬಡ ರೈತರಿಗೆ ಅನುಕೂಲವಾಗುತ್ತದೆ ಒಳ್ಳೆಯದಾಗುತ್ತದೆ, ಎಕ್ಸ್‌ಟೆಂಡ್ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಪಾರೆಸ್ಟ್ ಲ್ಯಾಂಡ್ ಮತ್ತು ಹುಲ್ಲುಗಾವಲು ಇರತಕ್ಕಂಥ ಜಮಿನಿನಲ್ಲಿ ಸಾಗುವಳಿ ಮಾಡಿರತಕ್ಕ ಅನೇಕ ಜನ ಅರ್ಜಿ ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಹೇಳಬೇಕು. ಎರಡನೆಯ ಪಾಯಿಂಟ್, ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಟೆನೆನ್ಸಿ ಪ್ರಕಾರ ಯಾವ ರೀತಿ ಆಪ್ಲಿಕೇಷನ್ ಕೊಡುವುದಕ್ಕೆ ಸರಕಾರ ಅವಕಾಶ ಕೊಟ್ಟಿದ್ದಾರೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಸಿ ಅಂಡ್ ಡಿ ಲ್ಯಾಂಡ್, ಎಸ್.ಸಿ.\ಎಸ್.ಟಿ. ಬ್ಯಾಕ್‌ವರ್ಡ್‌ಕ್ಲಾಸಸ್, ಗೊತ್ತಿಲ್ಲದವರು, ತಿಳುವಳಿಕೆ ಇಲ್ಲದವರು ಕೊಟ್ಟಿಲ್ಲ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಟೈಮ್ ಎಕ್‌ಸಟೆನೆಷನ್ ಕೊಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಇಳ್ಕಲ್ ವಿಜಯಕುಮಾರ್ : ಈ ಒಂದು ಕಾರ್ಯಕ್ರಮ ಬಡವರ ಕಲ್ಯಾಣ ಕಾರ್ಯಕ್ರಮ ಆಗಿದೆ. ಇದರ ಬಗ್ಗೆ ಕಂದಾಯ ಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ತಾಳಿ ಮುಂದೆ ಹೆಚ್ಚಿನ ಕಾಲಾವಕಾಶ ಕೊಡಬೇಕು. ಅವಧಿ

ಮುಗಿದಮೇಲೆ 28ಸಾವಿರ ಅರ್ಜಿಗಳನ್ನು ರಿಸೀವ್ ಮಾಡಿರುತ್ತೇವೆಂದು ಹೇಳುತ್ತಿದ್ದಾರೆ. ಅದರಂತೆ ಬಾಕಿ ಅರ್ಜಿಗಳಿಗೂ ಕಾಲಾವಕಾಶ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟು ಈ ಕಲ್ಯಾಣ ಕಾರ್ಯಕ್ರಮದಲ್ಲಿ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

SRI M. RAJASHEKARA MURTHY : I have already replied that time cannot be extended.

ಮಳೆಯ ಅಭಾವದಿಂದ ನೊಂದವರಿಗೆ ಪರಿಹಾರ

119 - ಶ್ರೀ ಗೋಪಾಲ ಎಂ. ಕಾನಡೆ (ಸಿರ್ಸಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿರ್ಸಿ-ಸಿದ್ದಾಪುರ ತಾಲ್ಲೂಕಿನಲ್ಲಿ ಮಳೆಯ ಹಾನಿಯಿಂದ ಉಂಟಾದ ನಷ್ಟವೆಷ್ಟು? (ನಷ್ಟದ ವಿವರ ನೀಡುವುದು)

ಆ) ಹಾಗಿದ್ದಲ್ಲಿ ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಮಳೆಯ ಹಾನಿಯಿಂದ ನಷ್ಟದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ :

ತಾಲ್ಲೂಕಿನ ಹೆಸರು	ಖಾಸಗಿ ಆಸ್ತಿಗೆ ಹಾನಿ					
	ಜಾನುವಾರು ಹಾನಿ		ಮನೆಗಳ ಹಾನಿ		ಬೆಳೆ ನಷ್ಟ	
	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ (ಬಾಗಶಃ)	ಹಾನಿ (ರೂ. ಗಳಲ್ಲಿ)	ಹೆಕ್ಟೇರ್	ನಷ್ಟ (ರೂ. ಗಳಲ್ಲಿ)
1. ಶಿರ್ಸಿ	1(ದನ)	3000	47	1.00,000	1645	874000
2. ಸಿದ್ದಾಪುರ	-	-	11	25,000	2580	769000

ತಾಲ್ಲೂಕಿನ ಹೆಸರು	ಖಾಸಗಿ ಆಸ್ತಿಗೆ ಹಾನಿ					
	ರಸ್ತೆ		ಸೇತುವೆ		ಸಣ್ಣ ನೀರಾವರಿ ಕೆರೆ	
	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ	ನಷ್ಟ (ರೂ. ಗಳಲ್ಲಿ)
1. ಶಿರ್ಸಿ	25	30,35,000	2	2,75,000	8	595000
2. ಸಿದ್ದಾಪುರ	23	5,60,000	1,1,00,000			
ಒಟ್ಟು ಹಾನಿ ಖಾಸಗಿ ಆಸ್ತಿಗೆ ರೂ.				17,71,000.0		
ಸಾರ್ವಜನಿಕ ಆಸ್ತಿಗೆ ರೂ.				45,65,000.00		
ಒಟ್ಟು ರೂ.				63,36.000.00		